ನಿವೇಶನ: ನಂಜನಗೂಡು ತಾ|| ದಲಿತರ ಹೋರಾಟ

[ಪಂಚಮ ಪ್ರತಿನಿಧಿಯಿಂದ]

ತಗಡೂರು ನಂಜನಗೂಡು ತಾಲ್ಲೂಕಿನ ಅತಿ ದೊಡ್ಡ ಗ್ರಾಮ. ಇಲ್ಲಿ 177 ಹರಿಜನರ ಮನೆಗಳಿದ್ದು, ಇವುಗಳಲ್ಲಿ ಒಟ್ಟು 250 ಸಂಸಾರಗಳು ಅಂದರೆ 1352 ಜೀವಗಳು ಉಸಿರುಕಟ್ಟಿ ಬದುಕಬೇಕಾಗಿದೆ. ಐದಾರು ಅಡಿ ಜಾಗಗಳಲ್ಲಿ ಮೈಮುದುರಿ ರಾತ್ರಿ ಕಳೆಯುವ ಹರಿಜನರು ಮಳೆಗಾಲದಲ್ಲಿ ಜೀವ ಕೈಯಲ್ಲಿಹಿಡಿದು ಕೂರಬೇಕಾಗುತ್ತದೆ. ಇರುವ ಜಾಗದಲ್ಲೇ ದನ ಕರು ಕಟ್ಟಿಕೊಳ್ಳಬೇಕಾದ್ದರಿಂದ ಕೊಟ್ಟಿಗೆ-ಮನೆ ಮತ್ತು ಬೀದಿ-ಬಚ್ಚಲುಗಳಿಗೆ ವ್ಯತ್ಯಾಸವಿಲ್ಲದೆ ಊರಿಗೆ ಊರೇ ನರಕದಂತಿದೆ. 30 ವರ್ಷಗಳಿಂದ ಸತತವಾಗಿ ಹರಿಜನರು ತಮ್ಮ ಈ ಗೋಳನ್ನು ಸರ್ಕಾರದ ಮುಂದೆ ತೋಡಿಕೊಂಡಿದ್ದರೂ ಸರ್ಕಾರ ಈ ಬಗ್ಗೆ ಕಿವುಡಾಗಿದೆ. ಅಧಿಕಾರಿಗಳು, ರಾಜಕಾರಣಿಗಳು ಮತ್ತೆ ಮೇಲ್ಜಾತಿಯ ಶ್ರೀಮಂತರು ಹರಿಜನರ ಸಂಕಟಗಳ ಜೊತೆ ಚಕ್ಕಂದವಾಡುತ್ತಿದ್ದಾರೆ.

1936 ರಿಂದ ಸರ್ಕಾರಕ್ಕೆ ಅರ್ಜಿಕೊಟ್ಟು ಸಂಕಟ ತೋಡಿಕೊಳ್ಳಲಾಗಿ ಊರಿನ ಪಕ್ಕದ 6 ಎಕರೆ ಭೂಮಿ ಹರಿಜನರ ನಿವೇಶನಕ್ಕೆಂದು ಮಂಜೂರಾಗಿ 6-6-1963 ರ ಗೆಜೆಟ್ಟಿನಲ್ಲಿ ಪ್ರಕಟವೂ ಆಯಿತು. ಆದರೆ ತಗಡೂರು ಖಾದಿ ಸಂಸ್ಥೆಯ ಪ್ರಮುಖರಾದ ತಗಡೂರು ರಾಮಚಂದ್ರರಾಯರು ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಹರಿಜನರ ಸೈಟನ್ನು ತಮ್ಮ ಜನತಾ ಹೈಸೂಲಿನ ಸೈಟನ್ನಾಗಿ ಪರಿವರ್ತಿಸಿಕೊಂಡಿದ್ದರಿಂದ ಹರಿಜನರಿಗೆ ಸಿಕ್ಕಿದ್ದ ನಿವೇಶನಗಳೂ ಧಕ್ಕಲಿಲ್ಲ.

1966ರಲ್ಲಿ ಜನತಾ ಹೈಸ್ಕೂಲಿನ ಪಕ್ಕದಲ್ಲಿಯೇ ಪುನಃ 6 ಎಕರೆ ಭೂಮಿ ಹರಿಜನರ ಸೈಟಿಗೆಂದು ಮಂಜೂರಾಯಿತು. ಆದರೆ ಆ ಸಮಯಕ್ಕೆ ಪಂಚಾಯ್ತಿ ಛೇರ್ಮನ್ನನಾಗಿದ್ದ ಡಿ. ನಾಗಚಂದ್ರ ಶರ್ಮ ಈ ವಿಷಯ ಹರಿಜನರ ಗಮನಕ್ಕೇ ಬರದಂತೆ ಮಂಜೂರಾಗಿದ್ದ ಭೂಮಿಯನ್ನು ಮೇಲ್ಜಾತಿಯವರಿಗೆ ಮಾರಾಟ ಮಾಡಿದನು.

ತುರ್ತುಪರಿಸ್ಥಿತಿಯಲ್ಲಿ ಸರ್ಕಾರ ಜನತಾ ಸ್ಕೀಂನ ಪ್ರಕಾರ ತಗಡೂರಿಂದ ಒಂದೂವರೆ ಮೈಲಿ ದೂರದಲ್ಲಿ ಹರಿಜನರಿಗೆ ಸೈಟುಗಳನ್ನು ಅಲಾಟ್ ಮಾಡಿತು. ಆದರೆ ಆ ಜಾಗ ನೀರಿಗೆ ಅನಾನುಕೂಲವಾಗಿದ್ದು ಕೆರೆ ಕೋಡಿ ಬೀಳುವ ಜಾಗವಾದ್ದರಿಂದ ಅಪಾಯದ ಸ್ಥಳವಾಗಿತ್ತು. ಈ

[ಕಡೆಯ ಪುಟ ನೋಡಿ]

ಪಂಚಮ

ಸಂಪುಟ : 3 ಸಂಚಿಕೆ : 18–19 5, ನವೆಂಬರ್ 1979 ಪಾಕ್ಷಿಕ ಬೆಲೆ : 20 ಪೈಸೆ

ದ. ಸಂ. ಸ. ಹೋರಾಟದಿಂದ ದಲಿತರಿಗೆ 50 ಲಕ್ಷ ರೂ. ಬೆಲೆಯ ಭೂಮಿ

[ವರದಿ : ಎಂ.ಡಿ. ಗಂಗಯ್ಯ]

ದಲಿತರಿಗೆ ಮಂಜೂರಾಗಬೇಕೆನ್ನುವಷ್ಟರಲ್ಲಿ ಚಿಕ್ಕಮಗಳೂರು ಜಿಲ್ಲೆ ಚಂಡಗೋಡು ಗ್ರಾಮದ ಕೆಸವಿನಹಕ್ಲುವಿನ ಸರ್ವೆ ನಂ. 74ರ 600 ಎಕರೆ ಬಗರ್‌ಹುಕುಂ ಪ್ರದೇಶದಲ್ಲಿ ಸುಮಾರು 100 ಎಕರೆಯನ್ನು ಆಕ್ರಮಿಸಿಕೊಂಡು ಸಾಗುವಳಿಗೆ ತೊಡಗಿದ್ದ ಸ್ಥಳೀಯ ಪ್ರಬಲ ರಾಜಕಾರಣಿಗಳು, ಭೂಮಾಲೀಕರ ವಿರುದ್ಧ ದಲಿತ ಸಂಘರ್ಷ ಸಮಿತಿ ಚಿಕ್ಕಮಗಳೂರು ಶಾಖೆಯ ದಿಟ್ಟ ಹೋರಾಟದಿಂದ ಈಗ 60 ದಲಿತ ಕುಟುಂಬಗಳಿಗೆ ತಲಾ 5 ಎಕರೆಯಂತೆ 50 ಲಕ್ಷ ರೂಗೂ, ಹೆಚ್ಚು ಬೆಲೆ ಬಾಳುವ ಭೂಮಿ ದೊರೆಯಲಿದೆ.

ಈ ಪ್ರದೇಶದ ಭೂಮಿಯನ್ನು ತಮಗೆ ಮಂಜೂರು ಮಾಡಿಕೊಡಬೇಕೆಂದು ಚಂಡಗೋಡು ಗ್ರಾಮದ ಭೂಹೀನ 60 ದಲಿತ ಕುಟುಂಬಗಳು ಎರಡು ವರ್ಷಗಳಿಂದಲೂ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಎಡಬಿಡದೆ ತಾಲ್ಲೂಕು ಕಚೇರಿ ಯಾತ್ರೆ ನಡೆಸಿ, ಕಂಡ ಕಂಡ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಕೈಮುಗಿದು ಮನವಿ ಸಲ್ಲಿಸಿ ನಿರಾಶರಾಗಿದ್ದರು.

ಈ ನಡುವೆ ಸ್ಥಳೀಯ ಶಾಸಕ ಸಿ. ಎ. ಚಂದ್ರೇಗೌಡನ ಮಗ ಸಿ. ಸುರೇಶ್, ಮರಿಸಿದ್ದೇಗೌಡ ಮತ್ತಿತರರು ತಮ್ಮ ರಾಜಕೀಯ ಪ್ರಭಾವದಿಂದ ಕಳೆದ ಜುಲೈ ತಿಂಗಳಲ್ಲಿ ಸುಮಾರು 100 ಎಕರೆ ಭೂಮಿಯನ್ನು ಆಕ್ರಮಿಸಿಕೊಂಡು ಕಾಡುಕಡಿಸಿ 20 ಸಾವಿರ ಏಲಕ್ಕಿ ಕಾಫಿ ಗಿಡಗಳನ್ನು ನೆಟ್ಟರು. ತಮಗೆ ಈ ಭೂಮಿ ಸಿಗಬಹುದೆಂದು ನಂಬಿದ್ದ ದಲಿತರನ್ನು ಈ ಕೃತ್ಯ ದಂಗು ಬಡಿಸಿತು: ದಲಿತರ ವಿಮೋಚನೆಗೆ ಹೋರಾಟವೇ ದಾರಿ ಎಂದು ನಂಬಿರುವ ದಲಿತ ಸಂಘರ್ಷ ಸಮಿತಿ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಎರಡು ತಿಂಗಳಿಂದ ಶೋಷಕರ ವಿರುದ್ಧ ಸಮರಕ್ಕಿಳಿಯಿತು.

ಹೋರಾಟದ ಹಂತಗಳು

ಜಿಲ್ಲಾಧಿಕಾರಿಗಳಿಗೆ, ಸರ್ಕಾರಕ್ಕೆ ಮನವಿ ಸಲ್ಲಿಸುವ ಮೂಲಕ ಹೋರಾಟಕ್ಕೆ ಹೆಜ್ಜೆಇಟ್ಟ ಸಂಘರ್ಷ ಸಮಿತಿ ಕರಪತ್ರ ಹೊರಡಿಸಿ ಬೆದರಿಕೆ ಹಾಕಿತು. ನಂತರ ಸೆಪ್ಟಂಬರ್ 24 ರಿಂದ ತಾಲ್ಲೂಕು ಕಚೇರಿ ಮುಂದೆ ಸಾಮೂಹಿಕ ಧರಣಿ ಆರಂಭಿಸಿತು. ಅಕ್ಟೋಬರ್ 5ರವರೆಗೆ ಸರದಿ ನಿರಶನವನ್ನು ನಡೆಸಿತು, ಇಷ್ಟರಲ್ಲಿ ಭಾರತೀಯ ಕಮ್ಯುನಿಸ್ಟ್

[ಕಡೆಯ ಪುಟ ನೋಡಿ]

AN APPEAL TO ALL THE SC/ST EMPLOYEES OF

CANARA BANK

Dear Comrades,

The discrimination of the untouchables in India continues unabated even 30 years after the advent of the Indian constitution, which abolished practice of untouchability in all its forms and guaranteed equality to all citizens irrespective of caste, creed, race or religion. This still remains a dream so far as the untouchables in India are concerned.

Not a day passes without atrocities on Harijans and Girijans. Our people are murdered, our women are molested. Their dwellings are set on fire; they are evicted from their land; they are denied employments and those employed are denied promotions. This sorrowful situation has been predicted and vividly explained by Dr. B. R. Ambedkar in the Memorandum he submitted to the sub-committee on Fundamental Rights of the Advisory Committee of Constituent Assembly. An extract is reproduced below:

> "..........The untouchables are surrounded by a vast mass of Hindu population which is hostile to them and which is not ashamed of committing any inequality or atrocity against them. For a redress of these wrongs which are matters of daily occurance, the untouchables have to call in, the aid of the administration, What is the character and composition of this administration? To be brief, the administration in India is completely in the hands of the Hindus. It is their monopoly. From top to bottom it is controlled by them. There is no department which is not dominated by them........... The result is that untouchables are placed between the Hindu-ridden administration, the one committing wrongs against them and the other protecting the wrong doer, instead of helping the victims.

Against this background, what can Swaraj mean to the untouchables?. It can only mean one thing, namely that while today it is only the administration that is in the hands of the Hindus. Under Swaraj the legislature and executive will also be in the hands of the Hindus. It goes without saying that such a Swaraj would aggravate the sufferings of the untouchables. For in addition to the hostile administration there will be an Indifferent legislature and a callous executive. The result will be that the administration unbridled in venom and in harshness, uncontrolled by the legislature and the executive, may pursue its policy of inequality towards the untouchables without any curb......

It is exactly this that is happening to the SC/ST employees of Canara Bank. The directive principles of state policy have been ignored, the orders of the executive have been defied and colossal injustice has been perpetrated on us. We are no longer able to bear it. We have therefore formed an All India Canara Bank SC/ST Employees Association to look after the welfare of the SC/ST employees working in Canara Bank and have registered it under Societies Registration Act. We request all the SC/ST employees of Canara Bank, who have not already become members, to enrole themselves as members as early as possible. This will not and should not in any way affect our participation in the activities of the Trade Unions in which we are and will continue as members.

We are very happy to announce that, the SC/ST employees Association functioning with its headquarter Agra (Uttar Pradesh) has already joining. We are sure that with the cooperation and support of you all we will be able to form a mighty All India Canara Bank SC/ST Employees Association, mighty in thought, mighty in action and mighty in our service to our people.

As a first step, when we failed to get our management respond to our apppeals, we have approached the High Court of Karnataka seeking justice. Our writ petition has been admitted and emergency notices have been ordered to be issued to the management and to the government of India. You might have already read about it in the news papers. We are sure that we will succeed. Let us wait and see. In the meanwhile, we once again request you all to become members of the Association. Please remember that we have nothing to lose except the chains by which we are tied.

Please send voluntery contributions towards court expenses urgently.

Cordially Yours,

Sd/-(TEEKEHALLY GOPALAKRISHNA)
Organising Secretary

Canara Bank SC/ST Employees Association
3rd Main, Gangenahally,
Near HGN School, Hebbal, Bangalore-560006

ದಲಿತ ನುಡಿ

ಮೇಕೆಗಳನ್ನು ಬಲಿಕೊಡುತ್ತಾರೆ ವಿನಃ ಹುಲಿಗಳನ್ನಲ್ಲ. ನಿಮ್ಮ ಆರ್ಥಿಕ, ಸಾಮಾಜಿಕ ಶೋಷಣೆಯ ವಿರುದ್ಧ ನೀವು ಪ್ರತಿಭಟನೆ ಮಾಡದಿದ್ದರೆ ನೀವು ಗರ್ಭದಲ್ಲಿಯೇ ನಶಿಸಿ ಹೋಗುವುದು ಲೇಸು, ಹುಟ್ಟಿದ ಭೂಮಿಗೆ ಭಾರವಾಗುವುದು ಬೇಡ.

—ಅಂಬೇಡ್ಕರ್

ದಲಿತರ ಹಣ ಕಬಳಿಸಿದ ಪುಡಾರಿ

ಚಿಕ್ಕಬಳ್ಳಾಪುರ ತಾಲ್ಲೂಕು ಕುಪ್ಪಹಳ್ಳಿ ಗ್ರಾಮದ 23 ಮಂದಿ ಹರಿಜನರಿಗೆ ತಲಾ 3 ಸಾವಿರ ರೂ.ಗಳಂತೆ ಮನೆ ಕಟ್ಟಿಕೊಳ್ಳಲು 1968ನೇ ಡಿಸೆಂಬರ್ 20 ರಂದು ಹೌಸಿಂಗ್ ಬೋರ್ಡ್ ಕಾರ್ಪೊರೇಷನ್ ಒಟ್ಟು 69 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿತು. ಆದರೆ ಶೋಷಕ ಪುಢಾರಿಯೊಬ್ಬನ ಭ್ರಷ್ಟಾಚಾರದಿಂದ ಈ ಹಣ ಹರಿಜನರ ಕೈಗೆ ಸಿಗದಾಗಿ ಮನೆಕಟ್ಟುವ ಆಸೆಯೆಲ್ಲ ಈವರಗೆ ಕನಸಾಗೇ ಉಳಿದಿದೆ.

ಹಣ ಮಂಜೂರಾದ ಕೂಡಲೇ ಆಗ ಚಿಕ್ಕಬಳ್ಳಾಪುರ ತಾಲ್ಲೂಕು ಅಭಿವೃದ್ಧಿ ಮಂಡಲಿ ಸದಸ್ಯನಾಗಿದ್ದ ಕೆ. ಬಿ. ಪಿಳ್ಳಪ್ಪ ಎಂಬಾತನು ಹರಿಜನರಿಂದ ಮಂಜೂರಾತಿ ಚೆಕ್‌ಗಳನ್ನು ಪಡೆದು ಚಿಕ್ಕಬಳ್ಳಾಪುರದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ನಲ್ಲಿ ನಿಮ್ಮ ಹೆಸರಿನಲ್ಲಿ credit ಮಾಡಿಸುತ್ತೇನೆಂದು ಭರವಸೆ ನೀಡಿದ ನಂತರ ಅಡಿಪಾಯ ಕೆಲಸಕ್ಕೆಂದು 750 ರಿಂದ 1000 ರೂ. ವರೆಗೆ ಮಾತ್ರ ಹಣ ಕೊಟ್ಟು ಉಳಿದ ಹಣವನ್ನು ನೀಡದೆ ಹರಿಜನರಿಗೆ ಮೋಸ ಮಾಡಿದ್ದಾನೆ.

ಈ ಅಲ್ಪಸ್ವಲ್ಪ ಹಣದಲ್ಲಿ ಮತ್ತು ಇನ್ನೂ ಬೇರೆ ಕಡೆ ಸಾಲಮಾಡಿ 23 ಮಂದಿ ಹರಿಜನರು ಸ್ವಲ್ಪ ಮಟ್ಟಿಗೆ ಗೋಡೆಗಳನ್ನು ಕಟ್ಟಿದ್ದು, ಮಳೆ-ಬಿಸಿಲಿಗೆ ಅವೆಲ್ಲ ಕುಸಿದು ಪಾಳು ಬಿದಿರುವುದನ್ನು ಈಗಲೂ ನೋಡಬಹುದು.

ಪಿಳ್ಳಪ್ಪನ ಈ ಹಗಲು ದರೋಡೆಯ ಬಗ್ಗೆ ಕೋಲಾರ ಜಿಲ್ಲಾಧಿಕಾರಿ ಮತ್ತು ಸರ್ಕಾರದ ಉನ್ನತ ಅಧಿಕಾರಿಗಳಿಗೂ ಮನವಿ ಮೂಲಕ ತಿಳಿಸಿದ್ದರೂ ಈವರೆಗೆ ಆತನ ಬಗ್ಗೆ ಯಾವುದೇ ಕ್ರಮವನ್ನಾಗಲಿ ಅಥವಾ ತಮಗೆ ನ್ಯಾಯವನ್ನಾಗಲಿ ಒದಗಿಸಿಕೊಟ್ಟಿಲ್ಲವೆಂದು ಅನ್ಯಾಯಕ್ಕೆ ತುತ್ತಾಗಿರುವ 23 ಮಂದಿ ಹರಿಜನರು ಪಂಚಮಕ್ಕೆ ತಿಳಿಸಿದ್ದಾರೆ.

ಕೋಲಾರದ ಕೆಲವೆಡೆ ದಲಿತರಿಗೆ ಸಾಮಾಜಿಕ ಬಹಿಷ್ಕಾರ

[ವರದಿ: ಸಿ. ಎಂ. ಮುನಿಯಪ್ಪ]

ಕೋಲಾರ ತಾಲ್ಲೂಕು ವೇಮಗಲ್ ಹೋಬಳಿ ಬೈರಂಡಹಳ್ಳಿ 120 ಮನೆಗಳಿರುವ ಗ್ರಾಮ. ಇದರಲ್ಲಿ ಸುಮಾರು 100 ಮನೆಗಳು ಸವರ್ಣೀಯರದು ಇನ್ನು ಉಳಿದ 20 ಮನೆಗಳು ಹರಿಜನರವು. ಸವರ್ಣೀಯರು ತಮ್ಮ ಅನುಕೂಲಕ್ಕೆ ತಕ್ಕಂತೆ ಹರಿಜನರನ್ನು ಎರಡು ಗುಂಪುಗಳನ್ನಾಗಿ ಒಡೆದಿದ್ದಾರೆ. ಇದರಲ್ಲಿ 18 ಮನೆಗಳು ಒಂದು ಗುಂಪಾದರೆ ಉಳಿದೆರಡು ಮನೆಗಳ ಹರಿಜನರು ಮತ್ತೊಂದು ಗುಂಪು.

ಈ ಎರಡು ಮನೆಗಳ ಹರಿಜನರ ಗುಂಪನ್ನು ಸವರ್ಣೀಯರು ತಮ್ಮ ಹಿಡಿತದಲ್ಲಿಟ್ಟುಕೊಂಡು ಹರಿಜನರ ವಿರುದ್ಧವೇ ಎತ್ತಿಕಟ್ಟುತ್ತಿದ್ದಾರೆ.

ಗ್ರಾಮದಲ್ಲಿರುವ ಕೆರೆ ತುಂಬಿದರೆ ಅದಕ್ಕೆ ಕೋಣಗಳನ್ನು ಬಲಿಕೊಡುವುದು ಒಂದು ಹಳೆ ಸಂಪ್ರದಾಯ.

ಕಳೆದ ಅಕ್ಟೋಬರ್ 9 ರಂದು ಬೈರಂಡಹಳ್ಳಿ ಕೆರೆಗೆ ದೀಪ ಬಿಡುವ ಕಾರ್ಯಕ್ರಮವಿತ್ತು. ಆ ದಿನ ಕೆರೆಗೆ ಕೋಣವನ್ನು ಬಲಿ ಕೊಡುವುದನ್ನು 18 ಮನೆಗಳ ಹರಿಜನರ ಗುಂಪು ವಿರೋಧಿಸಿತು. ಈ ವಿರೋಧವನ್ನು ಲೆಕ್ಕಿಸದೆ ಸವರ್ಣೀಯರ ಕೈಗೊಂಬೆಯಾಗಿರುವ ಮತ್ತೊಂದು ಹರಿಜನರ ಗುಂಪು ಕೋಣವೊಂದನ್ನು ಕೆರೆಗೆ ಬಲಿಕೊಟ್ಟಿತು. ಈ ಕಾರ್ಯವನ್ನು ಸವರ್ಣೀಯರು ನಿಂತು ಮಾಡಿಸಿದರು.

ಈ ಸಂಬಂಧದಲ್ಲಿ ತಕ್ಷಣವೇ ಡಾ॥ ಅಂಬೇಡ್ಕರ್ ಯುವಕ ಸಂಘದವರು ಪೋಲೀಸರಿಗೆ ದೂರು ನೀಡಿದರು. ವೇಮಗಲ್ ಪೋಲೀಸ್ ಠಾಣೆಯ ಪೇದೆಗಳು ಬಂದು ಕಡಿಯಲಾಗಿದ್ದ ಕೋಣದ ಮಾಂಸವನ್ನು ವಶಪಡಿಸಿಕೊಂಡು ಹೋದರು.

ಇದರಿಂದ ಕುಪಿತಗೊಂಡ ಸವರ್ಣೀಯರು ನಮ್ಮ ಕಾರ್ಯಕ್ಕೆ ಅಡ್ಡಬಂದು ಅವಮಾನ ಗೊಳಿಸಿದರೆಂದು ಮರುದಿನ ಬೆಳಿಗ್ಗೆ ಊರಿನಲ್ಲೆಲ್ಲ ಡಂಗೂರ ಬಾರಿಸಿ ಹರಿಜನರಿಗೆ ಇನ್ನು ಮುಂದೆ ನಮ್ಮ ಅಂಗಡಿಗಳಲ್ಲಿ ಯಾವ ಸಾಮಾನುಗಳನ್ನು ಕೊಡಬಾರದೆಂದು ಸಾರಿಸಿ ಸಾಮಾಜಿಕ ಬಹಿಷ್ಕಾರ ಹಾಕಿದರು.

ನಮ್ಮ ಹೊಲಗಳಲ್ಲಿ ಓಡಾಡಿದರೆ ಸಿಕ್ಕಲ್ಲೇ ಅವರ ಮೂಳೆ ಮುರಿಯಿರಿ ಎಂಬುದು ಆ ಸವರ್ಣೀಯರು ತಮ್ಮವರಿಗೆ ಆಜ್ಞಾಪಿಸಿದ್ದಾರೆ. ಅಂತಯೇ ಅಲ್ಲಲ್ಲಿ ಕೆಲವು ಹೊಡೆತ ಬಡಿತ ಘಟನೆಗಳಾಗಿವೆ.

ಈ ಘಟನೆ ತಿಳಿದ ಕೋಲಾರ ಜಿಲ್ಲಾ ದಲಿತ ಸಂಘರ್ಷ ಸಮಿತಿ ಎಸ್.ಪಿ. ಗೆ ದೂರು ನೀಡಿದಾಗ ಡಿ.ವೈ.ಎಸ್.ಪಿ. ಗ್ರಾಮಕ್ಕೆ ಭೇಟಿ ನೀಡಿದರಾದರೂ ಅಂಗಡಿಗಳಲ್ಲಿ ಸಾಮಾನುಗಳನ್ನು ಕೊಡುವುದಿಲ್ಲವೆಂದು ಹರಿಜನರು ತಮ್ಮ ಕಷ್ಟ ನಿವೇದಿಸಿಕೊಂಡಾಗ "ಬೇರೆ ಊರುಗಳಿಂದ ತಂದುಕೊಳ್ಳಿ" ಎಂದು ಹೇಳಿ ಸವರ್ಣೀಯರ ಜತೆ ಸಾಮೀಲಾಗಿದ್ದಾರೆ.

ಅಕ್ಟೋಬರ್ 20 ರಂದು ಪಕ್ಕದ ಹಳ್ಳಿಯೊಂದಕ್ಕೆ ಕೂಲಿಗೆ ಹೋಗಿ ಹಿಂದಿರುಗುತ್ತಿದ್ದ ನಾಲ್ವರು ಹರಿಜನರನ್ನು ಸವರ್ಣೀಯರು ಹೊಡೆದಿದ್ದಾರೆ. ಊರಿನಲ್ಲಿ ಸಾಮಾಜಿಕ ಬಹಿಷ್ಕಾರ ಇನ್ನೂ ಮುಂದುವರಿದಿದೆ. ಇಂತಹದ್ದೇ ಕಾರಣಗಳಿಗಾಗಿ ಶಿಡ್ಲಘಟ್ಟ ತಾಲ್ಲೂಕಿನ ತಲದುಮ್ಮನ ಹಳ್ಳಿಯಲ್ಲೂ ದಲಿತರ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಲಾಗಿದೆ.

ಯಲುವಳ್ಳಿ ದಲಿತರ ಮೇಲೆ ದಾಳಿ

ಮಾಲೂರು ತಾಲ್ಲೂಕು ಯಲುವಳ್ಳಿಯಲ್ಲಿ ತಾ॥ 4-10-79 ರಂದು ದಲಿತ ಬೈಚಪ್ಪ ಅದೇ ಊರಿನ ಜಮೀನುದಾರ ಎ. ವಿ. ವೆಂಕಟಪತಿ ನಾಯ್ಡು, ಪಟೇಲ್ ರಾಮಚಂದ್ರಪ್ಪ ಮುಂತಾದವರು ಹಲ್ಲೆ ನಡೆಸಿ ದೊಣ್ಣೆಗಳಿಂದ ಥಳಿಸಿದ್ದಾರೆ, 8-10-79 ರಂದು ಸುತ್ತಲ ಹಳ್ಳಿ ಸವರ್ಣೀಯ ಜಮೀನುದಾರರು ಒಂದಾಗಿ ದಲಿತ ಕೇರಿಯ ಮೇಲೆ ದಾಳಿಮಾಡಿದ್ದಾರೆ. ದಾಳಿಯಲ್ಲಿ ಬಿಟ್ಟು ಹೋಗಿದ್ದ ದೊಣ್ಣೆ, ಆಯುಧಗಳನ್ನು ರಕ್ತಮಯ ಬಟ್ಟೆಗಳಿಂದ ಪೋಲೀಸರ ವಶಕ್ಕೆ ನೀಡಿದಾಗಿಯೂ ಏನೂ ಕ್ರಮ ಕೈಗೊಂಡಿಲ್ಲ. ವಾರದಿಂದೀಚೆಗೆ ವೆಂಕಟಪತಿನಾಯ್ಡು ಮನೆಯಲ್ಲಿ ಕೃಷ್ಣಗಿರಿಯ ಆರು ಮಂದಿ ಗೂಂಡಾಗಳು ಬಂದು ನೆಲೆಸಿದ್ದಾರೆ. ಲೈಸನ್ಸ್ ರಹಿತ ಬಂದೂಕ ಹೊಂದಿರುವ ಶಂಕೆ ಕೂಡ ಇದೆ.

[ಕಳೆದ ಸಂಚಿಕೆಯಿಂದ ಮುಂದುವರೆದುದು]

ರಾಷ್ಟ್ರ ಸಮಾಜವಾದದ ಬ

ರಾಷ್ಟ್ರ : ಹುಟ್ಟು ಮತ್ತು ಕಾರ್ಯವ್ಯಾಪ್ತಿ :

ಅಂಬೇಡ್ಕರ್ ಅವರ ಪ್ರಕಾರ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಿಂದ ಉಂಟಾಗುವ ಅನಿವಾರ್ಯವಾದ ಒತ್ತಡಗಳು ರಾಜಕೀಯ ವ್ಯವಸ್ಥೆಯನ್ನು ಸ್ಥಿರಪಡಿಸುವುವು.[15] ಯಾರ ರಾಜಕೀಯ ಚೌಕಟ್ಟು ಸಂವಿಧಾನದಲ್ಲಿ ಮೂರ್ತರೂಪ ತಾಳಿದೆಯೋ ಅಂಥ ಸಿರಿವಂತರು-ಭೂಮಾಲೀಕರು-ಬಂಡವಾಳ ಶಾಹಿಗಳು ರಾಷ್ಟ್ರವನ್ನು ರಚಿಸಿರುತ್ತಾರೆ. 'ಈ ಹೊತ್ತಿನ ಸಂವಿಧಾನ ರಾಜಕೀಯ ಚೌಕಟ್ಟಿನ ರೂಪವನ್ನು ಮಾತ್ರ ಗೊತ್ತು ಮಾಡಿರುವುದು. ಇದು ಆರ್ಥಿಕ ಚೌಕಟ್ಟನ್ನು ಗೊತ್ತುಮಾಡಿಲ್ಲ ಅಥವಾ ಆ ವಿಷಯವನ್ನು ಗೊತ್ತುಮಾಡುವುದಕ್ಕೇ ಹೋಗಿಲ್ಲ'.[16]

ಅನೇಕ ಬರಹಗಳ[17] ಮುಖೇನ ತಿಳಿಯುವ ಸಂಗತಿಯಿದು: ರಾಷ್ಟ್ರ ಒಂದು ವರ್ಗದ ಅಧಿಕಾರದ ಅಂಗ ಹಾಗೂ ಒಂದು ವರ್ಗದವರು ಮತ್ತೊಂದು ವರ್ಗದವರ ಮೇಲೆ ದಬ್ಬಾಳಿಕೆ ನಡೆಸಲು ಉಪಯೋಗಿಸುವ ಅಂಗವೂ ಇದಾಗಿದೆ. ಇದು ಪ್ರಭುತ್ವವನ್ನು ಸೃಷ್ಟಿಸುವುದು ಹಾಗೂ ಇಂಥ ದಬ್ಬಾಳಿಕೆಗಳನ್ನು ನ್ಯಾಯಸಮ್ಮತವಾದ ವಿಧಿಯನ್ನಾಗಿಸುವುದು ; ಈ ಕಾರಣಕ್ಕಾಗಿ ಹುಟ್ಟಬಹುದಾದ ಕೆಲವೊಂದು ರೀತಿಯ ವರ್ಗ ಕಲಹಗಳನ್ನು ಒಂದೆರಡು ರಿಯಾಯ್ತಿಗಳನ್ನು ತೋರಿಸುವುದರ ಮುಖೇನ ಚಿವುಟಿ ಹಾಕುವುದು ಯಾಕೆಂದರೆ ರಾಷ್ಟ್ರ ಹುಟ್ಟಿರುವುದೇ ವರ್ಗಗಳ ನಡುವಿರುವ ವಿರೋಧಗಳ ಮೇಲೆ ತನ್ನ ಹತೋಟಿಯನ್ನು ಸಾಧಿಸುವುದಕ್ಕಾಗಿ[18]. ಉಳ್ಳವರು ಕೀಳು ವರ್ಗದ ಜನರ ಮೇಲೆ ತಮ್ಮ ಹತೋಟಿಯನ್ನು ಸಾಧಿಸುವ ಸಲುವಾಗಿ ಮತ್ತೊಂದು ಹೊಸ ಸಾಧನವಾದ ಈ ರಾಷ್ಟ್ರವೆಂಬುದನ್ನು ಹುಟ್ಟುಹಾಕಿರುವುದರಿಂದ, ಇದು ಸಂಪೂರ್ಣವಾಗಿ ಅವರ ಹಿತ ರಕ್ಷಣೆಯನ್ನೇ ಮಾಡುವುದು,[19] ರಾಷ್ಟ್ರವೆಂಬುದು ಮೊದಲಿನಿಂದಲೂ ಈ ಹೊತ್ತಿನ ಸುಖೀರಾಷ್ಟ್ರದ ತನಕವೂ-ಗುಲಾಮರನ್ನು, ಜೀತಗಾರರನ್ನು ಹೊಂದುವುದರ ! ಬಂಡವಾಳಗಾರರಿಂದ ದಿನಗೂಲಿಯವರ ಶೋಷಣೆಯಾಗುವುದರ ಸಂಕೇತವಾಗಿರುವುದು.[20]

ಈ ಪ್ರಜಾಪ್ರಭುತ್ವ ಗಣರಾಜ್ಯದಲ್ಲಿ "ಸಂಪತ್ತು" ನೇರವಾಗಿ ಅಲ್ಲದಿದ್ದರೂ ಅತ್ಯಂತ ಸ್ಪಷ್ಟ ... ಣದಲ್ಲಿ ತನ್ನ ಪ್ರಭಾವವನ್ನು ಬೀರಿರು... ಮೊದಲನೆಯದಾಗಿ-ಅಧಿಕಾರಿಗಳನ್ನು ಲಂ... ರರನ್ನಾಗಿ ಮಾಡುವುದರ ಮುಖೇನ. ... ಯದಾಗಿ-ಸರ್ಕಾರದ ಜೊತೆಗೇ ಒಂದು ರಿ... ಒಡಂಬಡಿಕೆಯನ್ನು ಮಾಡಿಕೊಳ್ಳುವುದರಿಂ... ಈ ಹೊತ್ತು ಹಣ ಹೊಂದಿರುವ ಅತ್ಯಂತ ... ವಶಾಲೀ ಸಂಸ್ಥೆಗಳೆಂದರೆ ಟಾಟಾ, ಬಿ... ಕಿರ್ಲೋಸ್ಕರ್, ಮೋದಿ, ಮಫತ್...

ಮೂಲ: ಡಿ. ಎಚ್. ಶ್ರೀಕಾಂತ್...

ಅನು: ದೇವಯ್ಯ ಹರವೆ

ಕಂಪನಿ ಇತ್ಯಾದಿಗಳು, ಈ ವರ್ಗದ ... ದಿನವಲ್ಲ ಸ್ವತಂತ್ರ ಬರುವುದಕ್ಕೆ ಮುಂಚಿನಿ... ಈ ದೇಶದ ರಾಜಕೀಯವನ್ನು ತಮ್ಮ... ಇಟ್ಟುಕೊಂಡು ಬಂದಿರುವರು. ಅದರಿಂ... 'ಸ್ವಾತಂತ್ರ್ಯ ಎಂಬುದು ಭೂಮಾಲೀಕರಿಗೆ... ವಂತರಿಗೆ ಮತ್ತು ಸರ್ವಾಧಿಕಾರಿ ಪ್ರವೃತ್ತಿ...

ಟೀಕೆ, ಸಾಚಾತನಗಳನ್ನು ಅನುಭವದಿಂದಲೇ ತಿಳಿ

"ಸಾಹಿತ್ಯ ಪರಿಷತ್ತು ನಿಲುಗಡೆಯಾದ ಸಾಹಿತ್ಯವನ್ನು ಮೆರಸುತ್ತಾ ಬಂದಿದೆ. ಅದಕ್ಕಿರುವ ರೂಪದಲ್ಲಿ ಎಂದೂ ನಮ್ಮಂಥವರ ಆಸೆಗಳನ್ನು ಮುಚ್ಚಲಾರದು. ನಮ್ಮ ಆಸೆಗಳ ಪೂರೈಕೆಗಾಗಿ ಅದರ ಕಡೆ ನೋಡುವುದೇ ನಮ್ಮ ತಪ್ಪು" ಎಂಬ ನಿಲುವನ್ನು ದಲಿತ ಬರಹಗಾರರು ತೆಗೆದುಕೊಂಡ ಕೆಲವೇ ತಿಂಗಳಲ್ಲಿ ಪ್ರಗತಿಪರ ಚಿಂತಕರು, ದಲಿತ ಲೇಖಕರು ಆದ ಲಕ್ಷ್ಮಣ್ ತೆಲಗಾವಿಯವರು ಗೌ॥ ಕಾರ್ಯದರ್ಶಿಯಾಗಿ ಕನ್ನಡ ಸಾಹಿತ್ಯ ಪರಿಷತ್ತನ್ನು ಪ್ರವೇಶಿಸಿದ್ದಾರೆ.


ಇವರ ಪ್ರವೇಶ ಸಹಜವಾಗಿಯೇ ದಲಿತ ಬರಹಗಾರರಲ್ಲಿ ಗೊಂದಲವನ್ನೂ, ಗಲಿಬಿಲಿಯನ್ನೂ ಹುಟ್ಟಿಸಬೇಕಿತ್ತು. ಆದರೆ ಏಕೋ ಏನೂ ಆಗಿಲ್ಲ. ಆದರೆ ಈಗ ಅಷ್ಟೋ-ಇಷ್ಟೋ ಹೆಸರುಗಳಿಸಿರುವ ದಲಿತ ಬರಹಗಾರರಿಗಿಂತ ತೆಲಗಾವಿಯವರು ಸ್ವಲ್ಪ ಭಿನ್ನ ಸ್ವಭಾವದವರು. ಯಾವುದೇ ಸಂಘಟನೆ ಕಟ್ಟಬೇಕಿದ್ದರೆ ಸಂಘಟಕರು ಸರ್ವರೀತಿಯಲ್ಲೂ ಬಲಿಷ್ಠರಾಗಬೇಕು. ಎನ್ನುವ ಅವರು 'ವ್ಯಕ್ತಿಶಕ್ತಿ' ಪ್ರತಿಪಾದಕರು.

ಇತಿಹಾಸ ಸಂಶೋಧನೆಯಲ್ಲಿ ತೀವ್ರ ಆಸಕ್ತಿ ಹೊಂದಿರುವ ಇವರು ಈಗಾಗಲೇ ಚಿತ್ರದುರ್ಗ ಇತಿಹಾಸ ಕುರಿತು ಮೂರು ಗ್ರಂಥಗಳನ್ನು ಮಿತ್ರರೊಡನೆ ಸಂಪಾದಿಸಿದ್ದಾರೆ. 'ದಲಿತ ಪರಂಪರೆ' ಮತ್ತು 'ಇತಿಹಾಸದಲ್ಲಿ ದಲಿತರು' ಎಂಬ ಕೃತಿಗಳ ರಚನೆಯಲ್ಲಿ ಈಗ ಇವರು ಮಗ್ನರು.

ಚಿತ್ರದುರ್ಗದ ಹುಟ್ಟಾ ದಲಿತ ಕುಟುಂಬದಿಂದ

ಪಂಚಮ ಸಂದರ್ಶನ

ಬಂದಿರುವ ಇವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಇತಿಹಾಸ ಅಧ್ಯಾಪಕರಾಗಿದ್ದು, ಕಳೆದ ಆಗಸ್ಟ್ ತಿಂಗಳಲ್ಲಿ ರಾಜೀನಾಮೆ ಕೊಟ್ಟರು. "ಕೈತುಂಬ ಸಂಬಳ ಪಡೆಯುತ್ತಿದ್ದ ನಾನು ಸಂಬಳವಿಲ್ಲದ ಗೌ॥ ಕಾರ್ಯದರ್ಶಿ ಸ್ಥಾನಕ್ಕಾಗಿ ಹ... ರಾಜೀನಾಮೆ ನೀಡಲಿಲ್ಲ. ಪರಿಷತ್ತನ್ನು ಸ...



ಒಂದುವರೆ ತಿಂಗಳ ಹಿಂದೆಯೇ ಕೆಲಸ ಬಿಟ್ಟಿ... ತ್ತಾರೆ ತೆಲಗಾವಿ.

ೆ ಡಾ|| ಬಿ. ಆರ್. ಅಂಬೇಡ್ಕರ್ ವಿಶ್ಲೇಷಣೆ

ಮಾತ್ರ' ಎಂದು [22] ಅಂಬೇಡ್ಕರ್ ಗ್ರಹಿಸಿ
ರು. ಇದರಿಂದ ರಾಷ್ಟ್ರದ ಆರ್ಥಿಕ ವ್ಯವಸ್ಥೆ
ಒಂದು ರೀತಿಯ ಅರಾಜಕತೆ ಅಥವಾ
ರ್ವಾಧಿಕಾರೀ ಧೋರಣೆಯು ತುಂಬಿದ್ದು !
ರಾಜಕೀಯ ಸ್ವಾತಂತ್ರ್ಯವನ್ನು ಸಂಪೂರ್ಣ
ಹಾಳುಮಾಡುವಂಥದ್ದಾಗಿದೆ. ಬೇರೆಬೇರೆ
ಗಳ ಏಕಸ್ವಾಮ್ಯ ಬಂಡವಾಳಗಾರರ ಜೊತೆ
ರು ಅಕ್ರಮ ಸಂಬಂಧಗಳನ್ನು ಇಟ್ಟುಕೊಂಡಿ
ರೋ ಅಂಥ ದೊಡ್ಡ ಪ್ರಮಾಣದ ಬಂಡ
ಶಾಹಿಗಳು ಮತ್ತು ಭೂಮಾಲೀಕರು ಈ
ದ ನಾಯಕತ್ವವನ್ನು ವಹಿಸುವರಲ್ಲದೆ, ಸರ
ನಡೆಯಿಸುವ ಸೂತ್ರದಾರರೂ ಆಗುವರು.
ಂದಲೇ ರಾಷ್ಟ್ರ ಮತ್ತು ಸರ್ಕಾರ ಎನ್ನುವುವು
ಪಕ ವರ್ಗದ ಸ್ವತ್ತುಗಳಾಗಿರುವುವು.

ಅಂಬೇಡ್ಕರ್ ಅವರು ರಾಷ್ಟ್ರ ಎಂಬುದು
ಖ್ಯವಾದ ಒಂದು ರಾಜಕೀಯ ಸಂಸ್ಥೆಯಾ
ಎಂದು ತಿಳಿಯುವರು. ಅದರಿಂದಲೇ ಇದು
ಹಳೆಯ ಎಷ್ಟೋ ರೀತಿಯ ಕಾರ್ಯಕ್ರಮ
ಗಳನ್ನು ಬಿಟ್ಟುಕೊಡಬೇಕು. ಇವರ ಪ್ರಕಾರ ರಾಷ್ಟ್ರದ ಕಾರ್ಯವ್ಯಾಪ್ತಿ ಈ ಕೆಳಕಂಡಂತಿರುವುದು: [23]

1. ರಾಷ್ಟ್ರ ಎನ್ನುವುದು ಪ್ರತಿಯೊಂದು ಜೀವಿಯ ಹಕ್ಕನ್ನು ರಕ್ಷಿಸಬೇಕು. ಸ್ವಾತಂತ್ರ್ಯ ಮತ್ತು ಸಂತೋಷವನ್ನೂ ವಾಕ್ ಸ್ವಾತಂತ್ರ್ಯ ಮತ್ತು ಮುಕ್ತರಾದ ಧಾರ್ಮಿಕ ಚಟುವಟಿಕೆಗಳು ನಡೆಯುವಂತೆ ಅವಕಾಶ ಕಲ್ಪಿಸಿಕೊಡಬೇಕು. ರಾಷ್ಟ್ರ ಎನ್ನುವುದು ಪ್ರಜಾಸತ್ತೆಗಾಗಿ, ಪ್ರಜೆಗಳ ಸುಖ ಮತ್ತು ಸಂತೋಷಕ್ಕಾಗಿ.

2. ಸಮಾಜದಲ್ಲಿರುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಅಸಮಾನತೆಗಳನ್ನು ಕೆಳವರ್ಗದ ಜನರಿಗೆ ಸರಿಯಾದ ರೀತಿಯ ಅವಕಾಶಗಳನ್ನು ಕಲ್ಪಿಸಿಕೊಡುವುದರ ಮುಖೇನ ತೊಡೆದು ಹಾಕಬೇಕು. ಅದಕ್ಕಾಗಿ ಕೆಳವರ್ಗದ ಜನತೆಗೆ ಸಂಘ ಸಂಸ್ಥೆಗಳನ್ನು ರಾಷ್ಟ್ರ ಸೃಷ್ಟಿಸಿಕೊಡಬೇಕು.

3. ರಾಷ್ಟ್ರದ ಯಾವುದೇ ಕಾರ್ಯ ಎಲ್ಲಾ ಜನಾಂಗಕ್ಕೂ ಮುಟ್ಟುವಂತಿರಬೇಕು. ಪ್ರತಿಯೊಬ್ಬನೂ ಯಾವುದೇ ಭಯವಿಲ್ಲದೆ ಇದರ ಸವಲತ್ತುಗಳನ್ನು ಉಪಯೋಗಿಸಿಕೊಳ್ಳಬೇಕು.

4. ರಾಷ್ಟ್ರದ ಇನ್ನೂ ಮುಖ್ಯವಾದ ಕೆಲಸವೆಂದರೆ-ಆಂತರಿಕ ಅವ್ಯವಸ್ಥೆಯ ಸಂದರ್ಭದಲ್ಲಿ, ಹೊರಗಿನ ಆಕ್ರಮಣದ ಸಂದರ್ಭದಲ್ಲಿ ತನ್ನ ಪ್ರಜೆಗಳಿಗೆ ಸರಿಯಾದ ರಕ್ಷಣೆಯನ್ನು ಒದಗಿಸಬೇಕು. ಡಾ: ಅಂಬೇಡ್ಕರ್ ಅವರ ರೀತ್ಯ ರಾಷ್ಟ್ರ ಎನ್ನುವುದು ರಾಜಕೀಯ ಪ್ರಜಾಪ್ರಭುತ್ವವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಳ್ಳಬೇಕಾದ ಒಂದು ಅಂಗ ಮತ್ತೂ ಅಂತದು ಜನತೆಯ ಆಸಕ್ತಿಯನ್ನೂ ಅದರಲ್ಲೂ ಸ್ಪಷ್ಟವಾಗಿ ದಲಿತ ವರ್ಗದವರ ಆಸಕ್ತಿಯನ್ನು ಕಾಯ್ದುಕೊಳ್ಳುವಂತಹುದು. ಯಾಕೆಂದರೆ ಅಲ್ಪಸಂಖ್ಯಾತರಿಗೆ ಸಿಕ್ಕುವಂಥ ಅವಕಾಶಗಳೆಲ್ಲಾ ಜಾತಿವಾದಿಗಳ ಆಕ್ರಮಣಕ್ಕೆ ತುತ್ತಾಗುವುದರಿಂದ ರಾಷ್ಟ್ರ ಇಂಥ ಸಂದರ್ಭದಲ್ಲಿ ನೆರವಾಗುವುದು ಅನಿವಾರ್ಯ.

ಅದರಿಂದ ಇವರ ಅಭಿಪ್ರಾಯದಲ್ಲಿ ರಾಷ್ಟ್ರ ಎನ್ನುವುದು ತುಂಬಾ ಜವಾಬ್ದಾರಿಯುತವಾದ ಒಂದು ಅಂಗ. ಇವರು ಪ್ರಜೆಗಳಿಗಿಂತ ಮೇಲಾದ ಸ್ಥಾನವನ್ನು ರಾಷ್ಟ್ರಕ್ಕೆ ಕೊಡುವುದಿಲ್ಲ. ಹೀಗಿದ್ದರೂ "ರಾಷ್ಟ್ರದ ಸ್ಥಾನಕ್ಕೆ ವಿಧೇಯತೆಯನ್ನು ತೋರುವುದು ಸುಭದ್ರವಾದ ಸರ್ಕಾರವನ್ನು ರಚಿಸುವುದಕ್ಕೆ ಸಹಾಯಕವಾಗುವುದು. ಹೀಗಲ್ಲದೆ ಅವಿಧೇಯರಾಗಿರುವುದೆಂದರೆ ಅರಾಜಕತೆಯಲ್ಲಿ ನಂಬಿಕೆ ಇರುವುದು ಎಂದು ಅರ್ಥವಾಗುತ್ತದೆ. ಅಂದರೆ ರಾಷ್ಟ್ರ ಅನೀತಿಯುತವಾದ ಕಾನೂನು ತಂದರೂ ಪ್ರಜೆಗಳು ತಮ್ಮ ಮನಸ್ಸಿನ ತಳಮಳವನ್ನು ತಡೆದೂ, ರಾಷ್ಟ್ರಕ್ಕೆ ವಿಧೇಯರಾಗಿರಬೇಕೆಂಬ ಅರ್ಥವಲ್ಲ. ರಾಷ್ಟ್ರವಿರುವುದು ಪ್ರಜೆಗಳ ಒಳಿತಿಗಾಗಿ. ಅದರಿಂದ ಪ್ರಜೆಗಳು ಯಾವುದಾದರೂ ಅಂಗದ ಜೊತೆ ಒರಟಾಗಿ ನಡೆದುಕೊಳ್ಳಬಾರದು. ತಮ್ಮದೇನಾದರೂ ಸಮಸ್ಯೆ ಇದ್ದರೆ ಅದನ್ನು ಸಂವಿಧಾನಾತ್ಮಕವಾಗಿ ಬಗೆಹರಿಸಿಕೊಳ್ಳಬೇಕು. [24]

ವ್ಯಕ್ತಿಯ ಸಂಪೂರ್ಣವಾದ ಸ್ವಾತಂತ್ರ್ಯದ ಕಡೆಗೆ ಅಂಬೇಡ್ಕರ್ ನಮ್ಮ ಮನಸ್ಸು ಸೆಳೆಯುವರು.

[6ನೇ ಪುಟ ನೋಡಿ]

ಬೇಕು: ಲಕ್ಷ್ಮಣ್ ತೆಲಗಾವಿ

ಸಂ ಆಗಿದ್ದ ಅಧ್ಯಾಪಕ ಹುದ್ದೆ ಬಿಟ್ಟದ್ದು
ತಮ್ಮ ಸೋದರ ಬರಹಗಾರರು ಪರಿಷ
ಬಗ್ಗೆ ವಿರೋಧಾಭಾಸ ತೋರಿದ ಸಮಯ
, ಅದನ್ನು ಪ್ರವೇಶಿಸಿದ ಬಗ್ಗೆ ಇವರು
ುವುದು ಅಧ್ಯಾಪಕ ವೃತ್ತಿ ನಾನು ಮೆಚ್ಚಿ
ಕೊಂಡದ್ದು. ಅದರ ಬಗ್ಗೆ ಗೌರವವಿದೆ.
ಬದುಕು ನಿಂತ ನೀರು-ಗಾಣಕ್ಕೆ ಕಟ್ಟಿದ
ಗಬಾರದು. ಚಲನ-ಕ್ರಿಯೆ ಇರಬೇಕು.
ನನ್ನನ್ನು ಬಹಳ ದಿನಗಳಿಂದ ಕಾಡಿಸುತ್ತಿತ್ತು.
ನ್ನ ನಾನಾ ರೂಪದಲ್ಲಿ ಕಾಣುವ ಸಾಹಿತ್ಯ
ನಟನೆ, ರಂಗಭೂಮಿ ಮತ್ತು ಚಲನಚಿತ್ರ
ಣ, ಅದರ ತಂತ್ರಜ್ಞಾನ ಮುಂತಾದ
ವಟಿಕೆಗಳ ಅಂತರಂಗದ ಬಯಕೆಗಳು ಪೀಡಿ
. ಸರಿ ಎನಿಸಿ ಕೆಲಸ ಬಿಟ್ಟೆ.

ಬ್ಬ ಉಳ್ಳವನಾಗಿ ಕೆಲಸಬಿಡ್ಲಿಲ್ಲ ಎಂದು
ಗ್ಗರಾಗಿ ವ್ಯವಸ್ಥೆಯ ಬಗೆಗೆ ಸಿಟ್ಟು ತಂದು
ರು "ಹೇಲು ತುಳಿದುಕೊಂಡು ಬಂದವರ
ಬೂಟುಗಳಿಗೆ ಪಾಲಿಷ್ ಹೊಡೆದು ಸಂಸಾರದ ಕೊಳೆಗೆ ನೆರವಾಗಿ, ಕಡುಬಡತನದಲ್ಲಿ ಓದಿದೆ. ಎಂ. ಎ. ಮುಗಿಸುವವರೆಗೂ ನನ್ನ ಪಾಲಿಗೆ ಯಾರೂ ನೆರವಾಗಲಿಲ್ಲ". ಆದರೆ ಇಂತಹ ಕಷ್ಟ-ನೋವುಗಳು ನನ್ನದೊಬ್ಬನದೇನಲ್ಲ, ನನ್ನ ಜನರ ಸ್ಥಿತಿಯೇ ಹಾಗಲ್ಲವೆ ? ಈ ಎಲ್ಲಾ ನೋವುಗಳು ರೂಪ ಪಡೆದ ವಿವಿಧ ಕ್ಷೇತ್ರಗಳ ಬಯಕೆಯೇ ಇದಕ್ಕೆಲ್ಲ ಕಾರಣ.

ಇನ್ನೂ ಪರಿಷತ್ತು ಸೇರಿದುದು; ನಾನು ಸಮಯ ಸಾಧಕನಾಗಿ ಬರಲಿಲ್ಲ. ಎಲ್ಲಾ ಮಾಧ್ಯಮಗಳಲ್ಲೂ ಕೆಲಸ ಮಾಡಬೇಕೆಂಬ ನನ್ನ ಮನಸ್ಸೇ ಪ್ರೇರಣೆ. ಮೇಲಾಗಿ ನನ್ನ ಮಿತ್ರರು ಪರಿಷತ್ತಿನ ಬಗೆಗೆ ತಾಳಿರುವ ಧೋರಣೆ, ಟೀಕೆಗಳನ್ನೂ ಸ್ವಾಗತಿಸುತೇನಾದರೂ ಅನುಭವದಿಂದ ದೊರೆಯುವ ಅವಕಾಶವೆಂದು ನನ್ನ ಸಂಶೋಧಕ ಬುದ್ಧಿ ಇಲ್ಲಿಗೆ ಕರೆ ತಂದಿತು.

[6ನೇ ಪುಟ ನೋಡಿ]

ಟೀಕೆ, ಸಾಚಾತನಗಳನ್ನು ಅನುಭವದಿಂದಲೇ ತಿಳಿಯಬೇಕು: ತೆಲಗಾವಿ

[ಮಧ್ಯದ ಪುಟದಿಂದ]

ಪ್ರ: ಸಾಹಿತ್ಯ ಪರಿಷತ್ತಿನ ಮೂಲಕ ದಲಿತ ಸಾಹಿತ್ಯ ಚಳುವಳಿ ಸಾಧ್ಯವೆ? ಸಾಧ್ಯವೆನ್ನುವುದಾದರೆ ಆ ದಿಕ್ಕಿನಲ್ಲಿ ಏನಾದರೂ ಪ್ರಯತ್ನ ಪಡುತ್ತಿದ್ದೀರಾ ?

ಉ: ಬಹುಮಟ್ಟಿಗೆ ಸಾಧ್ಯ. ಪರಿಷತ್ತಿನ ಧೋರಣೆ ವಿಷಯದಲ್ಲಿ ಆಮೂಲಾಗ್ರ ಬದಲಾವಣೆ ಆಗಬೇಕು. ಜನ ಜಾಗೃತಿ ಹಾಗೂ Educate ಮಾಡುವ ವಿಚಾರ ಸಾಹಿತ್ಯ, ಹತ್ತಿಕ್ಕಿದ ಜನಾಂಗವನ್ನು ಬಡಿದೆಬ್ಬಿಸುವ ಸಾಹಿತ್ಯ ಬೆಳೀಬೇಕಾಗಿದೆ. ಈ ದಿಕ್ಕಿನಲ್ಲಿ ಈ ಹಿಂದೆ ಪರಿಷತ್ತು ದಲಿತ ಸಾಹಿತ್ಯ ಗೋಷ್ಠಿಯನ್ನು ಏರ್ಪಡಿಸಿತ್ತು. ಇದು ಪ್ರಸ್ತುತ ಅಗತ್ಯವಾದುದರಿಂದ ನನ್ನ ಒಟ್ಟಾರೆ ಪ್ರಯತ್ನವೆಲ್ಲ ಇಂತಹದ್ದಕ್ಕಾಗಿ ಮೀಸಲು. ಈಗಾಗಲೇ ಇಂತಹ ವಿಚಾರದಲ್ಲಿ ಪ್ರಯತ್ನಿಸಿದ್ದೇನೆ. ಪರಿಷತ್ತಿನ ಮುಖಪತ್ರಿಕೆ 'ಕನ್ನಡ ನುಡಿ'ಯಲ್ಲಿ ಸೃಜನಶೀಲ ಮತ್ತು ದಲಿತ ಸಾಹಿತ್ಯಕ್ಕೆ ಸಂಬಂಧಿಸಿದಂತಹ ಲೇಖನಗಳಿಗೆ ಕೆಲವು ಪುಟಗಳನ್ನು ಮೀಸಲಿಡಬೇಕೆಂದು ಸಲಹೆ ಮಾಡಿದ್ದೇನೆ.

ಪ್ರ: ಸಾಹಿತ್ಯ ಪರಿಷತ್ತಿಗಿಂತ ಭಿನ್ನ ಧೋರಣೆ ಇಟ್ಟುಕೊಂಡು ಹುಟ್ಟಿದ ಬಂಡಾಯ ಸಾಹಿತ್ಯ ಸಂಘಟನೆ ಬಗ್ಗೆ ಏನು ಹೇಳುತ್ತೀರಿ ?

ಉ: ಅದು ಒಳ್ಳೆಯ ಬೆಳವಣಿಗೆ, ದಲಿತ ಮತ್ತು ಬಂಡಾಯ ಸಾಹಿತಿಗಳ ಆ ಕೆಲಸಕ್ಕೆ ನನ್ನ ಸಂಪೂರ್ಣ ಬೆಂಬಲವಿದೆ. ಏಕೆಂದರೆ ಅದರಲ್ಲಿ ನಾನೂ ಒಬ್ಬನಲ್ಲವೇ ? ನನ ಬದುಕಿನಲ್ಲೂ ಅವರಂತೆಯೇ ದುರ್ಭರ ಸನ್ನಿವೇಶವನ್ನು ಎದುರಿಸಿಬಂದಿರುವನು. ಸಾಮಾಜಿಕ ನ್ಯಾಯ ದೊರಕಿಸಿಕೊಳ್ಳುವ ದಿಸೆಯಲ್ಲಿ ಹೋರಾಡುವವರೆಲ್ಲರಿಗೂ ನನ್ನ ವೈಯಕ್ತಿಕ ಬೆಂಬಲ ಇದೆ. ಈ ದೃಷ್ಟಿಯಲ್ಲಿ ನಾನು ಯಾವ ರೀತಿಯಿಂದಲೂ ಭಿನ್ನನಲ್ಲ.

ಪ್ರ: ಹಾಗಾದರೆ ಬಂಡಾಯ ಸಂಘಟನೆಯಲ್ಲೇ ತಮ್ಮನ್ನು ಗುರುತಿಸಿಕೊಳ್ಳಬಹುದಿತ್ತಲ್ಲ ?

ಉ: ಬಹುಶಃ ಈ ಪ್ರಶ್ನೆಗೆ ನಾನು ಪರಿಷತ್ತಿಗೆ ಬಂದ ಬಗ್ಗೆ ಹೇಳಿದುದರಲ್ಲೇ ಉತ್ತರಿಸಿದ್ದೇನೆ ಅನ್ನಿಸುತ್ತೆ. ಹೊಸಪರಿಸರ ಅವಲಂಭಿಸುವುದು ನನ್ನ ಸ್ವಭಾವ, ಹೆಚ್ಚಾಗಿ ನಾನು ಕಂಡುಕೊಂಡ 'ವ್ಯಕ್ತಿಶಕ್ತಿ' ಇದಕ್ಕೆ ಕಾರಣ ಮತ್ತು ಸದ್ಯದ ನನ್ನ ಹಲವು ಉದ್ದೇಶಗಳ ಈಡೇರಿಕೆಗೆ ನಾನು ತುಳಿದಿರೋ ಮಾರ್ಗ ಸರಿ ಅಂತ ನಿಚ್ಚಳವಾಗಿ ಕಾಣಿಸುತ್ತಿದೆ.

ಪ್ರ: ದಲಿತ ಸಾಹಿತಿಗಳು ಸಾಹಿತ್ಯ ಪರಿಷತ್ತಿನಲ್ಲಿ ಸೇರಿಕೊಳ್ಳುವುದಕ್ಕೂ, ದಲಿತ ರಾಜಕಾರಣಿಗಳು ಕಾಂಗ್ರೆಸ್-ಜನತಾ ಸರ್ಕಾರಗಳಲ್ಲಿ ಮಂತ್ರಿಸ್ಥಾನಗಳನ್ನು ಗಿಟ್ಟಿಸಿಕೊಳ್ಳುವುದಕ್ಕೂ ವ್ಯತ್ಯಾಸವೇ ಇಲ್ಲ. ಅದರಿಂದ ನಮ್ಮ ಬದಲಾವಣೆ ಸಾಧ್ಯವಿಲ್ಲ ಎಂಬ ಮನೋಭಾವ ದಲಿತ ಬರಹಗಾರರಲ್ಲಿರುವುದರಿಂದ ಪರಿಷತ್ತಿನಂತಹ ಸಂಸ್ಥೆಗಳಲ್ಲಿ ನಿಮ್ಮ ಪ್ರವೇಶ ಎಷ್ಟು ಔಚಿತ್ಯ ?

ಉ: ಪ್ರಶ್ನೆ ತುಂಬಾ ಕಷ್ಟವಾಗೇ ಇದೆ. ನೋಡಿ ದಲಿತರಿಗೆ ಎಲ್ಲಾ ರಂಗಗಳ, ಸಂಸ್ಥೆಗಳ ಪರಿಚಯ ಇರಬೇಕಾದದ್ದು ಅಗತ್ಯ. ಅವರು ಎಲ್ಲಡೆ ತಮ್ಮ ಪ್ರಾತಿನಿಧ್ಯ ಸ್ಥಾಪಿಸಬೇಕು. ಪರಿಷತ್ತಿನಂತಹ ಸಂಸ್ಥೆಗಳು ದಲಿತರಿಗೆ ಎಷ್ಟರ ಮಟ್ಟಿಗೆ ಸಹಾಯಕಾರಿಯಾಗಿವೆ. ಅವರ ಸಾಮಾಜಿಕ, ಶೈಕ್ಷಣಿಕ, ಬೌದ್ಧಿಕ ಬೇಡಿಕೆಗಳನ್ನು ಪೂರೈಸುವಲ್ಲಿ ಪೂರಕವಾಗಿವೆಯೇ ಅನ್ನೋದನ್ನು ಕೂಲಂಕುಶವಾಗಿ ಪರಿಶೀಲಿಸುವ ಅಗತ್ಯ ಕಂಡು ಬರುತ್ತೆ. ಇವುಗಳನ್ನೆಲ್ಲಾ ಪರಿಶೀಲಿಸಿದ ನಂತರ ಇಂತಹುಗಳ ಆದರ್ಶ, ಸಾಚಾತನ, ಹಿನ್ನೆಲೆ, ಉದ್ದೇಶ. ಇವೆಲ್ಲವನ್ನು ನಾವು ಸ್ಪಷ್ಟವಾಗಿ ಗುರುತಿಸಬಿಡಬಹುದು. ಅಂದ ಮಾತ್ರಕ್ಕೆ ನಾನು ದಲಿತರ ಪರವಾಗಿ ಇಲ್ಲಿ ಮುಖ್ಯವಾಗಿ Investigation ಮಾಡಲಿಕ್ಕೆ ಬಂದಿದ್ದೇನೆಂದು ಭಾವಿಸಬೇಡಿ.

ಕ.ಸಾ.ಪ. ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಅದು ಎಷ್ಟರ ಮಟ್ಟಿಗೆ ದಲಿತರ ಹೋರಾಟ ಮನೋಭಾವವನ್ನು, ಅವರ ಅಗತ್ಯತೆಗಳನ್ನು ಬೆಂಬಲಿಸುತ್ತದೆ ಅನ್ನೋದರ ಬಗ್ಗೆ ಪ್ರಸ್ತುತ ಗಮನ ಹರಿಸಬೇಕಾಗಿದೆ.

ಪ್ರ: ದಲಿತ ಮತ್ತು ಬಂಡಾಯ ಸಾಹಿತಿಗಳನ್ನು ಪರಿಷತ್ತಿನ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಬೇಕೆಂದು ಬಯಸಿದ್ದೀರಾ ?

ಉ: ಖಂಡಿತವಾಗಿ, ಅದು ನನ್ನ ಉದ್ದೇಶಗಳಲ್ಲೊಂದು. ಅಂದರೆ ಅವರನ್ನ ಈ ವೇದಿಕೆಗೆ
ಕರೆತಂದು ಇಲ್ಲಿನ ವ್ಯವಸ್ಥೆಯೊಂದಿಗೆ ರಾ
ಮಾಡಿಸಬೇಕೆಂಬ ಉದ್ದೇಶ ನನ್ನದಲ್ಲ. ಅವ
ಇಚ್ಚೆಪಡುವುದಾದರೆ ಈ ವೇದಿಕೆಯ ಸಂಪೂ
ಪ್ರಯೋಜನ ಪಡೆಯಲಿಕ್ಕೆ ಶಕ್ತಿಮೀರಿ ನೆರವ
ಬಲ್ಲೆ. ಇಲ್ಲಿನ ಮಾಧ್ಯಮಗಳ ಮೂಲಕ
ಸಹ ಹೋರಾಟ ಧೋರಣೆಗಳನ್ನ ಜನತೆಗೆ
ಣಾಮಕಾರಿಯಾಗಿ convey ಮಾಡಬಹು
ಅನ್ನೋದೆ ನನ್ನ ನಂಬಿಕೆ. ಈ ಪ್ರಯತ್ನ
ಪರಿಷತ್ತಿನ ಇತರ ಪದಾಧಿಕಾರಿಗಳೂ ನೆರವಾ
ಬಲ್ಲರು. ಕೆಲವೊಮ್ಮೆ ಅದು ಅನಿವಾರ್ಯ
ಆಗಬಹುದು. ಆದರೆ ಈ ಬಗ್ಗೆ ಆಲೋಚಿ
ವುದು ದಲಿತ ಬರಹಗಾರರಿಗೆ ಬಿಟ್ಟ
ಅಲ್ವ...... ?

ಅಂಬೇಡ್ಕರ್ ವಿಶ್ಲೇಷಣೆ

[ಮಧ್ಯದ ಪುಟದಿಂದ]

ಈ ಸಂಬಂಧದಲ್ಲಿ ಕೆಲವೊಂದು ನಿರ್ಬಂಧಗಳ
ವುದು ಅವಶ್ಯಕವೆಂದು ಹೇಳಿ ವ್ಯಕ್ತಿಯ ಸಮಾ
ದಲ್ಲಿ ಸಂಪೂರ್ಣ ಸ್ವಾತಂತ್ರ್ಯವೆಂಬುದು ಸಾಧ್ಯ
ಇಲ್ಲವೆನ್ನುವರು.

ಆದರೆ ಈ ಹೊತ್ತಿನ ಇಂಡಿಯಾದ ಸಂವಿಧಾ
ಕೇವಲ ರಾಜಕೀಯ ಚೌಕಟ್ಟನ್ನು ಮಾತ್ರ ಗೊತ
ಮಾಡಿರುವುದು, ಇದು ಪಾರ್ಲಿಮೆಂಟರಿ ಪ್ರಜ
ಪ್ರಭುತ್ವ. ಇದು ಆರ್ಥಿಕ ಚೌಕಟ್ಟಿನಬ
ಯೋಚಿಸಿಯೇ ಇಲ್ಲ. ಅದರಿಂದ ನಮಗೆ (ದ
ತರಿಗೆ) ರಾಜಕೀಯ ವಿಷಯಗಳಲ್ಲಿ ಸಮಾನ
ಇದ್ದರೂ ಸಾಮಾಜಿಕ-ಆರ್ಥಿಕ ವಿಷಯಗಳ
ಇನ್ನೂ ಉಗ್ರವಾದ ಅಸಮಾನತೆಯನ್ನು ಎದು
ಸುತ್ತಿರುವೆವು. [25]

ಈ ರೀತಿಯ ವಿಶ್ಲೇಷಣೆಯಿಂದ ರಾಷ್ಟ್ರದ ಬಗ
ಕೆಲವೊಂದು ಮುಖ್ಯ ವಿಷಯಗಳನ್ನು ಸ್ಪಷ್ಟಪಡಿ
ಕೊಳ್ಳಬಹುದು. ಡಾ: ಅಂಬೇಡ್ಕರ್ ದೃ
ಯಲ್ಲಿ ಒಟ್ಟು ಜನತೆಯ ಹಿತಾಸಕ್ತಿಯನ
ಕಾಯ್ದುಕೊಳ್ಳುವುದು ರಾಷ್ಟ್ರದ ಒಂದು ಗುರಿಯ
ಗಿರುವುದು. ಅದೇ ಸಮಯದಲ್ಲಿ ಈಗಿನ ರಾಷ್ಟ್ರ
ಒಂದು ಗುರಿಯಾಗಿರುವುದು. ಅದೇ ಸಮಯ
ದಲ್ಲಿ ಈಗಿನ ರಾಷ್ಟ್ರದ ಗುರಿ ಎಂಬುದು ಶೋಷ
ವರ್ಗದ ಹಿತಾಸಕ್ತಿಯನ್ನೇ ಪಾಲಿಸುತ್ತಾ ಬ
ವುದು.

[ಮುಂದುವರೆಯುವುದ

ಕರ್ನಾಟಕದಲ್ಲಿ ಭಾಗ್ಯೋದಯದ ನಾಂದಿ

ಬಡತನದ ರೇಖೆಯ ಕೆಳಗಿರುವ ಹರಿಜನ-ಗಿರಿಜನರು, ಹಿಂದುಳಿದವರು ಹಾಗೂ ಅಲ್ಪ ಸಂಖ್ಯಾತರ ಏಳಿಗೆಗಾಗಿ ಕಳೆದ ಏಳುವರ್ಷಗಳಿಂದ ಏಕಪ್ರಕಾರವಾಗಿ ಕ್ರಮಕೈಗೊಂಡಿರುವ ಕರ್ನಾಟಕ ಸರ್ಕಾರ ಕನ್ನಡ ರಾಜ್ಯೋತ್ಸವದ ಈ ಶುಭ ಸಮಾರಂಭದಲ್ಲಿ ಮತ್ತೆ ಹಲವಾರು ಪರಿಣಾಮಕಾರಿ ಯೋಜನೆಗಳನ್ನು ಕೈಗೊಂಡಿದೆ.

ಆಡಳಿತ ಭಾಷೆಯಾಗಿ ಕನ್ನಡ

ಈ ವರ್ಷದ ರಾಜ್ಯೋತ್ಸವಕ್ಕೆ ವಿಶೇಷ ಮೆರಗು. ಇಂದಿನಿಂದ ಸಚಿವಾಲಯವೂ ಸೇರಿದಂತೆ ಎಲ್ಲಾ ಇಲಾಖೆಗಳಲ್ಲೂ ಆಡಳಿತದಲ್ಲಿ ಕನ್ನಡದ ವ್ಯಾಪಕ ಬಳಕೆಗೆ ಸರಕಾರ ಆದೇಶ ನೀಡಿದೆ. ಈ ದೆಸೆಯಲ್ಲಿ ನಿರ್ದಿಷ್ಟ ಕಾರ್ಯವಾಗಿ ಪ್ರತಿ ರೆವಿನ್ಯೂ ವಿಭಾಗದಿಂದ ಎರಡು ಜಿಲ್ಲೆಗಳಂತೆ 8 ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ.

ಭಾಗ್ಯಜ್ಯೋತಿ

ರಾಷ್ಟ್ರದಲ್ಲೇ ಪ್ರಥಮವಾದ ಕರ್ನಾಟಕದ ಭಾಗ್ಯಜ್ಯೋತಿ ಯೋಜನೆ ಬಡತನ ಸುಧಾರಣೆ ದಾರಿಯ ಮತ್ತೊಂದು ಮೈಲಿಗಲ್ಲು.

ಒಂದು ಮನೆಗೆ ಒಂದು ವಿದ್ಯುತ್ ದೀಪವನ್ನೊದಗಿಸುವುದು ಈ ಯೋಜನೆಯ ಗುರಿ. ಇದರಿಂದ ಒಂದು ತಿಂಗಳಿಗೆ ತಗಲುವ ವಿದ್ಯುತ್ ಶುಲ್ಕ ಎರಡೂವರೆ ರೂಪಾಯಿಗಳು. ಈ ಶುಲ್ಕದ ಒಂದು ರೂಪಾಯಿಯನ್ನು ಮನೆ ಒಡೆಯ ನೀಡಬೇಕು. ಈ ವರ್ಷ ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಾಲ್ಕು ಸಾವಿರ ಗ್ರಾಮಗಳ ನಲವತ್ತು ಸಾವಿರ ಬಡವರ ಮನೆಗಳಿಗೆ ಈ ಸೌಲಭ್ಯ ದೊರೆಯಲಿದೆ.

ಭಾಗ್ಯಮಂದಿರ

ಗ್ರಾಮಾಂತರ ಪ್ರದೇಶದ ಬಡವರಿಗಾಗಿ ವಸತಿ ಸೌಲಭ್ಯ ಕಲ್ಪಿಸುತ್ತಿರುವ ಕರ್ನಾಟಕ ಸರಕಾರ ಇದೀಗ ಪಟ್ಟಣದಲ್ಲಿ ವಾಸಿಸುವ ಬಡಜನತೆಗಳಿಗೂ ಈ ಸೌಕರ್ಯ ಕಲ್ಪಿಸಲು ಮುಂದಾಗಿದೆ. ಈ ವರ್ಷದಲ್ಲಿ 3 ಕೋಟಿ ರೂ. ಗಳ ವೆಚ್ಚದಲ್ಲಿ 7,450 ಮನೆಗಳನ್ನು ಪುರಸಭೆ, ನಗರಸಭೆ ಹಾಗೂ ಘೋಷಿತ ಪ್ರದೇಶಗಳಲ್ಲಿ ನಿರ್ಮಿಸಲಿದೆ.

ಇದಲ್ಲದೆ, ಪಟ್ಟಣಗಳಲ್ಲಿ ವಾಸಿಸುವ ಬಡಜನರ ಮನೆಗಳ ಸುಧಾರಣೆ ಹಾಗೂ ಅಭಿವೃದ್ಧಿಗಾಗಿ ಈ ವರ್ಷ 90 ಲಕ್ಷ ರೂ. ಗಳನ್ನು ಮಂಜೂರು ಮಾಡಲಾಗಿದೆ. 3,500 ಮನೆಗಳಿಗೆ ಈ ಸೌಲಭ್ಯ ದೊರೆಯಲಿದೆ.

ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ-ಆರ್ಥಿಕ ನೆರವು

ಪಂಚಾಯತಿ ರಾಜ್ಯ ಆಂದೋಲನವನ್ನು ಪರಿಣಾಮಕಾರಿಗೊಳಿಸಲು ಕರ್ನಾಟಕ ಸರಕಾರ ಎಂಟುಸಾವಿರ ಪಂಚಾಯತಿಗಳಿಗೆ ಹೆಚ್ಚಿನ ಅಧಿಕಾರ ಹಾಗೂ ಹೆಚ್ಚಿನ ಹಣ ಕೊಡಲಿದೆ. ಅಭಿವೃದ್ಧಿ ಕಾರ್ಯಗಳಾದ ಕೆರೆ, ರಸ್ತೆ ನಿರ್ಮಾಣ ಹಾಗೂ ನಿರ್ವಹಣೆ, ಪ್ರಾಥಮಿಕ ಶಾಲೆಗಳ ದುರಸ್ತಿ, ಶಾಲಾಮಕ್ಕಳ ಮಧ್ಯಾಹ್ನದ ಉಪಹಾರ ವ್ಯವಸ್ಥೆ, ಜನತಾ ವಸತಿ ನಿರ್ಮಾಣ ಹಿಂದುಳಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಪ್ರಮಾಣ ಪತ್ರದ ನೀಡಿಕೆ ಮುಂತಾದ ಹೊಣೆಗಾರಿಕೆಗಳನ್ನು ಪಂಚಾಯತಿಗಳಿಗೆ ನೀಡಲಾಗುವುದು.

ಕರ್ನಾಟಕ-ಬಡವರ ಏಳಿಗೆಗಾಗಿ ನಿರಂತರ ಯತ್ನ ನಡೆಸುತ್ತಿರುವ ರಾಜ್ಯ.

ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆಯ ಪ್ರಕಟಣೆ.

ಸಂ. ವಾಪ್ರನಿ: 3135: 79-80

ನಂಜನಗೂಡು ತಾಲ್ಲೂಕು ದಲಿತರ ಹೋರಾಟ

[ಒಂದನೇ ಪುಟದಿಂದ]

ತೊಂದರೆಯನ್ನು ಆಗ ಸಮಾಜ ಕಲ್ಯಾಣ ಮಂತ್ರಿಗಳಾಗಿದ್ದ ಎನ್. ರಾಚಯ್ಯನವರಲ್ಲಿ ಹೇಳಿಕೊಳ್ಳಲಾಗಿ ಅವರು ಊರಿನ ಪಕ್ಕದ 'ರಂಗದ ಮಾಳ'ದಲ್ಲಿ ಸೈಟು ಕೊಡಿಸುವುದಾಗಿ ಆಶ್ವಾಸನೆ ಇತ್ತರು. ಆದರೆ ಮೇಲ್ಜಾತಿಯವರು ರಾತ್ರೋರಾತ್ರಿ ಆ ಜಾಗಕ್ಕೆ ಸಸಿಗಳನ್ನು ನೆಟ್ಟು ಅದು ಹರಿಜನರಿಗೆ ದೊರೆಯದಂತೆ ಮಾಡಿದರು.

ಮತ್ತೆ ಎನ್. ರಾಚಯ್ಯನವರ ಆದೇಶದ ಮೇರೆಗೆ ಊರಿನ ಆಸ್ಪತ್ರೆಯ ದಕ್ಷಿಣಕ್ಕೆ 12 ಎಕರೆ 19 ಗುಂಟೆ ಭೂಮಿ ಸೈಟಿಗೆಂದು ಮಂಜೂರಾಗಿ ಅದು 22-4-1976ರ ಗೆಜೆಟ್ಟಿನಲ್ಲಿ ಪ್ರಕಟವೂ ಆಯಿತು. ಆದರೆ ಈವರೆಗೆ ಆ ಭೂಮಿ ಹರಿಜನರಿಗೆ ಹಂಚಿಕೆಯಾಗಿಲ್ಲ. 30 ವರ್ಷಗಳಿಂದ ಸತತವಾಗಿ ನಡೆದಿರುವ ವಂಚನೆ ಮತ್ತೊಮ್ಮೆ ಮರುಕಳಿಸತೊಡಗಿದೆ. ಹರಿಜನರ ಓಟಿನಿಂದಲೇ ಗೆದ್ದು ತಾಲ್ಲೂಕು ಬೋರ್ಡಿನ ಉಪಾಧ್ಯಕ್ಷರಾಗಿರುವ ಮೇಲ್ಜಾತಿಯ ಭಾರಿ ಸಾಹುಕಾರ ಟಿ. ಎಸ್. ನಾಗರಾಜ್ ಅವರ 2 ಎಕರೆ ಭೂಮಿ ಮಂಜೂರಾಗಿರುವ ಸೈಟಿನ ಭೂಮಿಯಲ್ಲಿ ಸೇರಿದ್ದು, ಅವರು ಬಿ. ಡಿ. ಒ., ಅಸಿಸ್ಟೆಂಟ್ ಕಮಿಷನರ್ ಮತ್ತು ಮಂತ್ರಿಗಳನ್ನು ತಮ್ಮ ಕೈಯಲ್ಲಿ ಹಾಕಿಕೊಂಡು ಹರಿಜನರಿಗೆ ಸೈಟು ಹಂಚಿಕೆಯಾಗದಂತೆ ಪ್ರಭಾವ ಬೀರಿದ್ದಾರೆ. ಸೈಟು ಹಂಚಲು ಬಂದ ಅಧಿಕಾರಿಗಳನ್ನೆ 'ಜೈಲಿಗೆ ಹಾಕಿಸುತ್ತೇನೆಂದು' ಹೆದರಿಸಿ ಕಳಿಸಿದ್ದಾರೆ. ಇನ್ನೊಂದು ಕಡೆ ಬಿ. ಡಿ. ಓ ಅಸಿಸ್ಟೆಂಟ್ ಕಮೀಷನರ್, ಮಂತ್ರಿಗಳು ಹೀಗೆ ಒಬ್ಬೊಬ್ಬರ ಮುಂದೆಯೂ ಹರಿಜನರು ತಮ್ಮ ಗೋಳುತೋಡಿಕೊಂಡು ಸೈಟು ಹಂಚಿಸಿಕೊಡುವಂತೆ ಬೇಡಿಕೊಂಡಿದ್ದರೂ ಅವರ ಹೃದಯ ಕರಗಿಲ್ಲ.

ಇಂಥ ಅಮಾನವೀಯ ವಂಚನೆ ಮತ್ತು ಅಧಿಕಾರಿಗಳ ಕ್ರೂರ ಮೌನವನ್ನು ಪ್ರತಿಭಟಿಸಲು 17-10-1979ರಂದು ನಂಜನಗೂಡಿನಲ್ಲಿ ದಲಿತ ಸಂಘರ್ಷ ಸಮಿತಿ ನಂಜನಗೂಡು ತಾಲ್ಲೂಕು ಶಾಖೆ ನೇತೃತ್ವದಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ ನಡೆಯಿತು.

ತಮಗೆ ನ್ಯಾಯ ದೊರಕುವ ತನಕ ಹೋರಾಟ ನಡೆಸುತ್ತೇವೆಂದು ನಿಶ್ಚಯಿಸಿರುವ ಅಲ್ಲಿನ ಹರಿಜನರು ದಲಿತ ಸಂಘರ್ಷ ಸಮಿತಿಯ ನೇತೃತ್ವದಲ್ಲಿ ಶೋಷಕರ ಮತ್ತು ಅನ್ಯಾಯಗಳ ವಿರುದ್ಧ ಸತ್ಯಾಗ್ರಹ, ಪ್ರದರ್ಶನ ಮುಂತಾದ ಪ್ರತಿಭಟನೆಗಳನ್ನು ಮುಂದುವರಿಸಿದ್ದಾರೆ.

ಒಂದೊಂದು ಗ್ರಾಮದಲ್ಲಿ ಒಂದೊಂದು ಕಥೆ

ಕಲ್ಲಕ್ಕಂದ ಗ್ರಾಮದಲ್ಲಿ ಸೈಟಿಗೆ ಭೂಮಿ ಮಂಜೂರಾಗಿ ಅದನ್ನು ಹಂಚುತ್ತಿರುವಾಗ ಸ್ಟೇ ಬಂತು ಅಂಥ ಹೇಳಿ ನಿಂತುಹೋದದ್ದು: ಈಗ ಅಲ್ಲಿ ಜಮೀನುದಾರರು ಪಸಲು ತೆಗೆಯುತ್ತಿದ್ದಾರೆ, ಅಳಗಂಚಿ ಗ್ರಾಮದಲ್ಲಿ ಸೈಟಿಗೆ ಮಂಜೂರಾದ ಭೂಮಿಯು, ಭೂ ಒಡತಿಯ ಕೈವಾಡದಿಂದಾಗಿ 'ಹಂಚಿಸಿ ಕೊಡುತ್ತೇನೆ' ಎಂದಿದ್ದ ಜಿಲ್ಲಾಧಿಕಾರಿಗಳ ಆಶ್ವಾಸನೆ ಆಗಾಗೆ ಉಳಿದಿದೆ. ಚುಂಚನಹಳ್ಳಿ ಗ್ರಾಮದ ದಲಿತರು ಮಂಜೂರಾದ ಭೂಮಿಯಲ್ಲಿ ಸೈಟು ಹಂಚಿಸಿಕೊಳ್ಳಲು ಎಷ್ಟು ಹೆಣಗಿದರೂ ಸಾಗುತ್ತಿಲ್ಲ; ಅಸಿಸ್ಟೆಂಟ್ ಕಮೀಷನರ್ ಕೇಳಿದರೆ "ಸರ್ವೆ ಆಫೀಸರನ್ನು ಕಾಣಿ"ಎಂಥಲೂ, ಸರ್ವೆ ಆಫೀಸರನು ಕಾಣಲು "ಅಸಿಸ್ಟೆಂಟ್ ಕಮೀಷರನ್ನೇ ಕಾಣಿ" ಎಂಥಲೂ ಹೇಳಿ ನಕ್ಕುಬಿಟ್ಟಿದ್ದಾರೆ. ಕಾಮಳ್ಳಿಯಲ್ಲಿ ಸೈಟಿಗೆಂದು ಮಂಜೂರಾದ ಭೂಮಿಯನ್ನು ಬಿಟ್ಟು "ನಿಮಗೆ ಬೇರೆ ಭೂಮಿ ಕೊಡಿಸುತ್ತೇವೆ" ಎಂದು ಲಂಚ ಪಡೆದಿರುವ ಅಧಿಕಾರಿಗಳು ದಲಿತರ ಕಣ್ಣೊರೆಸುವ ನಾಟಕವಾಡುತ್ತಿದ್ದಾರೆ. ಸೋನಹಳ್ಳಿ, ಕೂಡ್ಲಪುರ ಇತ್ಯಾದಿ ಅನೇಕ ಗ್ರಾಮಗಳ ಸೈಟಿನ ಕಥೆಗಳೂ ಮೇಲ್ಕಂಡಂತೆ ಆಗಿವೆ.

ವಿಶೇಷಸೂಚನೆ

ಎಲ್ಲಾ ದಲಿತ ವಿದ್ಯಾರ್ಥಿ ನಿಲಯಗಳಿಗೂ ಉಚಿತವಾಗಿ ಒಂದೊಂದು ಪ್ರತಿ 'ಪಂಚಮ'ವನ್ನು ಕಳುಹಿಸಲು ನಿರ್ಧರಿಸಲಾಗಿದೆ. ದಯವಿಟ್ಟು ದ. ಸಂ. ಸ ಶಾಖೆಗಳು, ವಿದ್ಯಾರ್ಥಿ ನಿಲಯಗಳ ವಿಳಾಸವನ್ನು ಪತ್ರಿಕೆ ವಿಳಾಸಕ್ಕೆ ಕಳುಹಿಸಿಕೊಡಬೇಕಾಗಿ ಕೋರಿಕೆ.

ದ. ಸಂ. ಸ ರಾಜ್ಯಸಮಿತಿ ತೀರ್ಮಾನದ ಮೇರೆಗೆ

—ಸಂಪಾದಕ

ದಲಿತರಿಗೆ ದಕ್ಕಿದ ಭೂಮಿ

[ಒಂದನೇ ಪುಟದಿಂದ]

ಪಕ್ಷದ ಜಿಲ್ಲಾ ಘಟಕ ಸಂಘರ್ಷ ಸಮಿತಿಯ ಬೆಂಬಲಕ್ಕೆ ನಿಂತು 8 ರಂದು ದ. ಸಂ. ಸ ಕಾರ್ಯಕರ್ತರ ಜತೆಗೂಡಿ ಕಾಂ. ಬಾಸು ಅವರು ಆಮರಣಾಂತ ಉಪವಾಸ ಕೈಗೊಂಡರು. ಸರ್ಕಾರದ ನಿರ್ಲಕ್ಷ್ಯ ಎಂದಿನಂತೆ ಮುಂದುವರಿದಿದ್ದುದರಿಂದ ಪ್ರತಿಭಟನಾ ಪ್ರದರ್ಶನ ನಡೆಸಲಾಯಿತು. ಪ್ರದರ್ಶನದಲ್ಲಿ ಮಹಿಳೆಯರು ಸೇರಿದಂತೆ ಸುಮಾರು 70 ಗ್ರಾಮಗಳ 1500 ಜನಕ್ಕೂ ಹೆಚ್ಚು ದಲಿತರು ಪಾಲ್ಗೊಂಡರು.

ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗೆ ಮತ್ತೆ ಮನವಿ ಸಲ್ಲಿಸಿದಾಗ "ಭೂಮಿ ಹಂಚಲು ಇನ್ನೂ ಒಂದು ತಿಂಗಳುಬೇಕು" ಎಂದರು. ರಾಜಕೀಯ ಪ್ರಭಾವಕ್ಕೊಳಗಾಗಿಬೇಜಾಬ್ದಾರಿ ಉತ್ತರನೀಡಿದ ಜಿಲ್ಲಾಧಿಕಾರಿ ವರ್ತನೆಯಿಂದ ಸಿಟ್ಟಿಗೆದ್ದ ಕಾರ್ಯಕರ್ತರು ಮರುದಿನ ರಾತ್ರಿ ಸಿ. ಪಿ. ಐ. ಕಾರ್ಯಕರ್ತರ ನೆರವಿನಿಂದ ಪಂಜಿನ ಮೆರವಣಿಗೆ ನಡೆಸಿ ಇಡೀ ಚಿಕ್ಕಮಗಳೂರನ್ನೇ ಭೀತಿಗೊಳಿಸಿದರು. ದ. ಸಂ. ಸ ಜಿಲ್ಲಾ ಕಾರ್ಯಕರ್ತ ಸಿ. ಸಣ್ಣಯ್ಯ ಅವರು 10 ರಂದು ಆಮರಣಾಂತ ನಿರಶನ ಕೈಗೊಂಡರು. ಅಂದು ಸಂತೆ ದಿನವಾದ್ದರಿಂದ ತಾಲ್ಲೂಕು ಕಚೇರಿಯ ಮುಂಬಾಗಿಲನ್ನು ಮುಚ್ಚಿ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಪಿಕೆಟಿಂಗ್ ನಡೆಸಲಾಯಿತು. ಈ ಹಂತದಲ್ಲಿ ಪೋಲೀಸರು 20 ಮಂದಿ ದ. ಸಂ. ಸ ಕಾರ್ಯಕರ್ತರನ್ನು ಬಂಧಿಸಿದರು.

ಬಂಧಿತ ಕಾರ್ಯಕರ್ತರನ್ನು ಬೇಷರತ್ ಬಿಡುಗಡೆಗೊಳಿಸಿ ಇಲ್ಲವೇ ನಮ್ಮನ್ನು ಬಂಧಿಸಿ ಎಂದು ಸಂಜೆ 100ಕ್ಕೂ ಹೆಚ್ಚು ಮಂದಿ ಕಾರ್ಯಕರ್ತರು ಪೋಲೀಸ್ ಠಾಣೆಗೆ ಘೋಷಣೆಗಳೊಡನೆ ನುಗ್ಗಿದರು. ಭಯಗೊಂಡ ಪೊಲೀಸ್ ಅಧಿಕಾರಿಗಳು "ನಿಮ್ಮನ್ನು ಬಂಧಿಸಿಲ್ಲ" ಎಂದು ಬಂಧಿತರನ್ನು ಬಿಡುಗಡೆ ಮಾಡಿದರು.

ಅಂದು ಸಂಜೆಯೇ ಜಿಲ್ಲಾಧಿಕಾರಿಗಳು ದ. ಸಂ. ಸ ಕಾರ್ಯಕರ್ತರನ್ನು ಕರೆದು ಇನ್ನು ಮೂರು ದಿನಗಳ ಒಳಗೆ ಚಂಚಗೋಡು ದಲಿತರಿಗೆ ಭೂಮಿಯ ಹಕ್ಕುಪತ್ರ ಕೊಡುವುದಾಗಿ ಭರವಸೆ ನೀಡಿದರು. ಈಗ ಹಕ್ಕುಪತ್ರ ನೀಡಲಾಗುತ್ತಿದೆ.

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ನೂತನ್ ಪ್ರಿಂಟಿಂಗ್ ಪ್ರೆಸ್, ಬೆಂಗಳೂರು-3 ಇಲ್ಲಿ ಮುದ್ರಿಸಲ್ಪಟ್ಟು ಗೋವಿಂದಯ್ಯ ವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : 5ಎ ವಾಣಿ ವಾಣಿಜ್ಯಶಾಲಾ, ಪತ್ರಕರ್ತರ ಕಾಲೋನಿ. ಬೆಂಗಳೂರು-560002.